## ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1131

2 ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3 ಉತ್ತರಿಸುವ ದಿನಾಂಕ : 25–07–2024

4 ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯನ್ನು ಐದು ಪಾಲಿಕೆಯನ್ನಾಗಿ ವಿಭಜಿಸಲು ಮುಂದಾಗಿರುವುದು ನಿಜವೇ; | ಘನತ್ಯಾಜ್ಯ ನಿರ್ವಹಣೆ, ವಿಶ್ವದರ್ಜೆಯ ಮೂಲಸೌಕರ್ಯ ಒದಗಿಸುವುದು, ಪ್ರವಾಹ ನಿರ್ವಹಣೆ, ಸಾರ್ವಜನಿಕ ಸ್ಥಳಗಳ ಸರಿಯಾದ ಬಳಕೆ ಇತ್ಯಾದಿಗಳಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿರುವ ಸಂದರ್ಭಗಳಲ್ಲಿ ಉತ್ತಮ ನಾಗರಿಕ ಕೇಂದ್ರಿತ ವಿತರಣೆಗಳನ್ನು ಒದಗಿಸಲು ಬಿ.ಬಿ.ಎಂ.ಪಿ. ಅಧಿನಿಯಮ, 2020ರ ನಿಬಂಧನೆಗಳು ಅಸಮರ್ಪಕವಾಗಿವೆ ಎಂದು ಪದೇ ಪದೇ ಸಮಾಜದ ವಿವಿಧ ಸ್ಥರಗಳಿಗೆ ಭಾಸವಾಗುತ್ತದೆ. ಬ್ಯಾಂಡ್ ಬೆಂಗಳೂರು ಹೆಸರಿನಲ್ಲಿ ಸುಸ್ಥಿರ ಮತ್ತು ಯೋಜಿತ ಅಭಿವೃದ್ಧಿಯನ್ನು ಖಾತ್ರಿಪಡಿಸುವ ಮೂಲಕ ಉತ್ತಮ ಗುಣಮಟ್ಟದ ಜೀವನವನ್ನು ಒದಗಿಸಿ ಬೆಂಗಳೂರನ್ನು ಆದರ್ಶ ಜಾಗತಿಕ ತಾಣವಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಆದ್ದರಿಂದ, ಈ ನಿಟ್ಟಿನಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ, 2024 ಅನ್ನು ಕರ್ನಾಟಕ ವಿಧಾನ ಸಭೆಯಲ್ಲಿ ಮಂಡಿಸಲಾಗಿದೆ. ಇದು ನಗರದ ಆಡಳಿತ ಮತ್ತು ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸುವ ಮತ್ತು ನಾಗರಿಕರಿಗೆ ಉತ್ತಮ ಸೇವೆಗಳನ್ನು ನೀಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮವಾಗಿದೆ. |
| ಆ | ಸರ್ಕಾರ ಬೆಂಗಳೂರಿನ ಅಭಿವೃದ್ಧಿಗಾಗಿ ವಿಭಜಿಸುತ್ತಿದೆಯೇ; ಅಥವಾ ಆದಾಯಕ್ಕಾಗಿ ವಿಭಜಿಸುತ್ತಿದೆಯೇ; | |
| ಇ | ಯಾರ ವರದಿ ಅಥವಾ ಶಿಫಾರಸ್ಸಿನ ಮೇಲೆ ಬೆಂಗಳೂರನ್ನು ವಿಭಜಿಸಲು ಮುಂದಾಗಿದೆ? (ವಿವರಗಳನ್ನು ಒದಗಿಸುವುದು) | |

ಸಂಖ್ಯೆ: ನಅಇ 133 ಬಿಬಿಎಸ್ 2024(ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ.